Vijayavani pg 08 & 8B

ವಿ ರೈತ ಮಿತ್ರ



■ಸಪೋಟದಲ್ಲಿ ಎಲೆಗಳು ಗೂಡು ಮಾಡುವ ಕೀಟದ ಹಾವಳಿ ಹೆಚ್ಚಿದ್ದು, ಇದಕ್ಕೆ ಪರಿಹಾರ ತಿಳಿಸಿ.

| ಮರಿಯಪ್ಪ ಬಾಗಲಕೋಟೆ

ಸಪೋಟ ಉಷ್ಣವಲಯದ ಮುಖ್ಯವಾದ ಹಣ್ಣಿನ ಬೆಳೆಯಾಗಿದೆ. ಸಪೋಟದಲ್ಲಿ ಎಲೆ ಗೂಡು ಮಾಡುವ ಕೀಟವು ಎಲೆಗಳನ್ನು ಹೆಣೆದು ಗೂಡು ಮಾಡಿ, ಹಸಿರು ಭಾಗವನ್ನು ಕೆರೆದು ತಿನ್ನುತ್ತವೆ. ಇದರಿಂದಾಗಿ ಎಲೆಗಳು ಒಣಗಿ ಜೋತು ಬೀಳುತ್ತವೆ. ಹಾವಳಿ ಹೆಚ್ಚಿದ್ದಲ್ಲಿ ಇದರ ಮರಿಹುಳುಗಳು ಹೂ ಮೊಗ್ಗುಗಳನ್ನು ಮತ್ತು ಎಳೆಯ ಕಾಯಿಗಳನ್ನು ಸಹ ಎಲೆಗಳ ಜೊತೆ ಹೆಣೆದು ಕೊರೆದು ತಿನ್ನುತ್ತವೆ. ಇದರಿಂದ ಇಳುವರಿ ಕುಂಠಿತಗೊಳ್ಳುತ್ತದೆ. ನಿರ್ವಹಣೆ: ಹಾನಿಗೊಳಗಾದ ಎಲೆಗಳನ್ನು ಆರಿಸಿ ಕಿತ್ತು ನಾಶ ಪಡಿಸುವುದು. ಅವಶ್ಯವಿದ್ದಲ್ಲಿ ಪ್ರತಿ ಲೀಟರ್ ನೀರಿಗೆ ಫ್ಲುಬೆಂಡೈಅಮೈಡ್ 45 ಎಸ್.ಸಿ 0.2 ಮಿ.ಲೀ ನಂತೆ ಬೆರೆಸಿ ಸಿಂಪಡಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

ರಾಷ್ಟ್ರೀಯ ರೇಷ್ಮೆ ಮೇಳ



ವಿಜಯವಾಣಿ

ಬೆಂಗಳೂರು: ಭಾರತದ ಅತ್ಯಂತ ದೊಡ್ಡ ರೇಷ್ಮೆ ಮತ್ತು ಹತ್ತಿ ಉಡುಪುಗಳ ಪ್ರದರ್ಶನ ಮತ್ತು ಮಾರಾಟ ಮೇಳವಾದ ರಾಷ್ಟ್ರೀಯ ರೇಷ್ಮೆ ಪ್ರದರ್ಶನವು ಜೆ.ಪಿ. ನಗರ 1ನೇ ಹಂತದ 15ನೇ ಕ್ರಾಸ್‌ನಲ್ಲಿರುವ ಸಿಂಧೂರ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯುತ್ತಿದೆ. ಯುಗಾದಿ ಹಬ್ಬದ ಋತುವಿನಲ್ಲಿ ಸಾಂಪ್ರದಾಯಿಕ ಉಡುಗೆ- ತೊಡುಗೆಗಳು, ಫ್ಯಾಷನ್ ಆಭರಣಗಳು, ಪರಿಕರಗಳು, ಮದುವೆಯ ವಿಶೇಷ ಸಂಗ್ರಹಗಳ ಪ್ರದರ್ಶನವಿದೆ. 16ರವರೆಗೂ ನಡೆಯಲಿರುವ ಮೇಳದಲ್ಲಿ ಭಾರತದ ನೇಯ್ಗೆ ಸಂಪ್ರದಾಯಗಳನ್ನು ಅನಾವರಣಗೊಳಿಸುವ 1,500ಕ್ಕೂ ಅಧಿಕ ಬಗೆಯ ಸೀರೆಗಳು ಮತ್ತು ಉಡುಗೆ ಸಾಮಗ್ರಿಗಳಿವೆ.

■ ಸಿಂಧೂರ ಕನ್ವೆನ್ಷನ್ ಸೆಂಟರ್‌ನಲ್ಲಿ ಬೃಹತ್ ಪ್ರದರ್ಶನ, ಮಾರಾಟ

ಕೈಯಿಂದ ತಯಾರಿಸಿದ ರೇಷ್ಮೆ ಮತ್ತು ಹತ್ತಿ ಸೀರೆ, ಡಿಸೈನರ್ ಮತ್ತು ಎಥ್ನಿಕ್ ವೇರ್, ಡ್ರೆಸ್ ಮೆಟೀರಿಯಲ್ಸ್, ಹೋಮ್ ಲೆನಿನ್, ಫ್ಯಾಷನ್ ಆಭರಣಗಳು, ಮಣ್ಣಿನ ಛಾಯೆಗಳಲ್ಲಿರುವ ಸೆಣಬಿನ ರೇಷ್ಮೆಗಳು, ಭಾಗಲ್ಪುರಿ ಸೀರೆಗಳು, ಬನಾರಸ್ ರೇಷ್ಮೆ, ರಾಜಸ್ಥಾನಿ ಡಾಬು ಪ್ರಿಂಟ್, ಗುಜರಾತ್ ಪಟೋಲ ಹೀಗೆ ಬಗೆಬಗೆಯ ಆಕರ್ಷಣೆಗಳಿವೆ. ಹಲವು ಉತ್ಪನ್ನಗಳ ಮೇಲೆ ರಿಯಾಯಿತಿಯೂ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ದೂ: 94122 58826 ಸಂಪರ್ಕಿಸಬಹುದು.

ತೋಟಗಾರಿಕೆ ಇಲಾಖೆ ಖಾಲಿ ಹುದ್ದೆ ಶೀಘ್ರ ಭರ್ತಿ


ವಿಧಾನಪರಿಷತ್ತು: ತೋಟಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿ ಮಾಡಲಾಗುವುದು ಎಂದು ತೋಟಗಾರಿಕೆ ಸಚಿವ ಎಸ್. ಎಸ್.ಮಲ್ಲಿಕಾರ್ಜುನ ಹೇಳಿದರು. ಬಿಜೆಪಿ ಸದಸ್ಯ ಹಣಮಂತ ನಿರಾಣಿ ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಉತ್ತೇಜನ ನೀಡಬೇಕು. ಇಡೀ ರಾಜ್ಯದಲ್ಲಿ ಒಂದೇ ತೋಟಗಾರಿಕೆ ವಿವಿಯಲ್ಲಿ 360 ಬೆಳೆಗಳನ್ನು ಬೆಳೆಯಲಾಗುತ್ತಿದೆ. ಸಂಶೋಧನೆ ಕೂಡ ನಡೆಯುತ್ತಿದೆ. ಇರುವ ವಿವಿಯನ್ನು ಮುಚ್ಚುವುದನ್ನು ಬಿಟ್ಟು ಅದಕ್ಕೆ ಅನುದಾನ ನೀಡಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಸಚಿವರನ್ನು ಪ್ರಶ್ನಿಸಿದರು. ತೋಟಗಾರಿಕೆ ಇಲಾಖೆಯಲ್ಲಿ ಒಟ್ಟು 950 ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 450 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದಿರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಿದ್ದೇವೆ ಎಂದರು.



Hosadiganta pg 12

ರಂಗನತಿಟ್ಟುವಿನಲ್ಲಿ ಚಿಟ್ಟೆ ಪಾರ್ಕ್

ಮಂಡ್ಯ: ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ಅಂದಾಜು 30 ಲಕ್ಷ ರೂ. ವೆಚ್ಚದಲ್ಲಿ ಚಿಟ್ಟೆ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಮಾತನಾಡಿದ ಸಚಿವರು, ''ಚಿಟ್ಟೆ ಪಾರ್ಕ್‌ನಲ್ಲಿ ಚಿಟ್ಟೆಗಳ ಸಂತಾನೋತ್ಪತ್ತಿಗಾಗಿ 1,500 ಚದರ ಅಡಿ ಮೀಸಲಿಡಲು ಉದ್ದೇಶಿಸಲಾಗಿದೆ. 2025-26ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು 30 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಚಿಟ್ಟೆ ಪಾರ್ಕ್ ನಿರ್ಮಿಸಲಾಗುತ್ತಿದೆ,'' ಎಂದು ತಿಳಿಸಿದ್ದಾರೆ.




V-karnataka pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

ತೋಟಗಾರಿಕೆ ವಿವಿ ವಿಭಜನೆಗೆ ತಕರಾರು

ವಿಧಾನ ಪರಿಷತ್ತು: ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಲೇಜುಗಳನ್ನು ಪ್ರತ್ಯೇಕಿಸಿ ಮಂಡ್ಯ ಜಿಲ್ಲೆಯಲ್ಲಿ ಸ್ಥಾಪಿಸುತ್ತಿರುವ ನೂತನ ವಿವಿಗೆ ಹಸ್ತಾಂತರ ಮಾಡುತ್ತಿರುವ ಸರ್ಕಾರದ ಕ್ರಮಕ್ಕೆ ಸದಸ್ಯರು ಆಕ್ಷೇಪ ತೆಗೆದರು. ಇದಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಕೂಡಾ ಬೆಂಬಲ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಕಲಾಪದ ವೇಳೆ ಬಿಜೆಪಿ ಸದಸ್ಯರಾದ ಪಿ.ಎಚ್. ಪೂಜಾರ್ ಹಾಗೂ ಡಾ. ತಳವಾರ್ ಸಾಬಣ್ಣ ಅವರು ವಿಷಯ ಪ್ರಸ್ತಾಪ ಮಾಡಿದಾಗ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಬಾಗಲಕೋಟೆ ವಿಶ್ವವಿದ್ಯಾಲಯ ಹೆಸರು ಗಳಿಸಿದೆ. ಹಲವಾರು ಕಾಲೇಜುಗಳನ್ನು ಒಳಗೊಂಡು ಅಲ್ಲಿ ತೋಟಗಾರಿಕೆಗೆ ಸಂಬಂಧಿಸಿದಂತೆ ವಿಷಯಗಳನ್ನು ತಿಳಿಸಲಾಗುತ್ತಿದೆ. ಕಳೆದ 7 ವರ್ಷದಿಂದ ಐಸಿಎಆರ್ ಫೆಲೋಶಿಪ್ ಪಡೆಯುತ್ತಿದೆ. ಹೀಗಿದ್ದಾಗ ವಿವಿಯನ್ನು ಪ್ರತ್ಯೇಕಿಸುತ್ತಿರುವುದೇಕೆ ಎಂದು ಪ್ರಶ್ನೆ ಮಾಡಿದರು. ಇವರ ಮಾತಿಗೆ ಸಭಾಪತಿ ಬಸವರಾಜ ಹೊರಟ್ಟಿ ಕೂಡಾ ದನಿಗೂಡಿಸಿ, ವಿವಿ ಪ್ರತ್ಯೇಕ ಮಾಡುತ್ತಿರುವುದಕ್ಕೆ ನನ್ನ ವಿರೋಧವೂ ಇದೆ ಎಂದರು.



ಈ ವೇಳೆ ಡಾ. ತಳವಾರ್ ಸಾಬಣ್ಣ ಹಾಗೂ ಪಿ.ಎಸ್. ಪೂಜಾರ್ ಮಾತನಾಡಿ, ನೂತನ ತೋಟಗಾರಿಕೆ ವಿವಿ ಮಾಡಿ ಅದಕ್ಕೆ ಯಾರ ತಕರಾರೂ ಇಲ್ಲ. ಆದರೆ, ಚೆನ್ನಾಗಿ ನಡೆಯುತ್ತಿರುವ ವಿವಿಯನ್ನು ವಿಭಜನೆ ಮಾಡುವುದು ಸರಿಯಲ್ಲ. ಇದು ಉತ್ತರ ಕರ್ನಾಟಕದ ರೈತರಿಗೆ ಅನ್ಯಾಯ ಮಾಡಿದಂತೆ ವಿವಿಗೆ ಮರಣ ಶಾಸನ ಬರೆದಂತೆ. ಸರ್ಕಾರ ವಿವಿಗೆ ಪೆಟ್ಟು ಕೊಟ್ಟಿದೆ ಎಂದು ಆಕ್ರೋಶ ಹೊರ ಹಾಕಿದರು. ಈ ವೇಳೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಮಂಡ್ಯ ಭಾಗದ ಶಾಸಕರುಗಳು ತಮ್ಮ ಭಾಗದಲ್ಲಿ ತೋಟಗಾರಿಕೆ ವಿವಿ ಮಾಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಈ ಹಿನ್ನೆಲೆಯಲ್ಲಿ ಅಲ್ಲಿ ವಿವಿ ಮಾಡಲಾಗಿದೆ. ಆದರೆ, ಬಾಗಲಕೋಟೆ ತೋಟಗಾರಿಕೆ ವಿವಿಯನ್ನು ಮುಚ್ಚುತ್ತಿಲ್ಲ ಎಂದು ಹೇಳಿದರು.

ಆದರೆ, ಇವರ ಮಾತನ್ನು ಸದಸ್ಯರು ಕೇಳಲಿಲ್ಲ. ಚೆನ್ನಾಗಿ ನಡೆಯುತ್ತಿರುವ ವಿವಿಯನ್ನು ಪ್ರತ್ಯೇಕಿಸುವುದಾದರೂ ಏಕೆ ಎಂದು ಪ್ರಶ್ನೆ ಮಾಡಿದರು. ಈ ವಿಷಯವಾಗಿ ಅನೇಕ ಸದಸ್ಯರು ಚರ್ಚೆ ಮಾಡಲು ಮುಂದಾದರು.

ಇದನ್ನು ಗಮನಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು ಈ ವಿಷಯವನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳುವುದಾಗಿ ಪ್ರಕಟಿಸಿದರು.

S-karanataka Pg 05

Viswavani Pg 09

ವೀಳ್ಯದೆಲೆ ಮಾರುಕಟ್ಟೆಗೆ ಪೂರೈಕೆ ಶೇ. 50 ಕುಸಿತ | ಇಳುವರಿಯೂ ಕಡಿಮೆ

ಒಂದು ವೀಳ್ಯದೆಲೆ ಬೆಲೆ-5ರುಪಾಯಿ

ಎ ಹೂವಪ್ಪ ಐ ಹೆಚ್. ಬೆಂಗಳೂರು

ಯಾವುದೇ ಧಾರ್ಮಿಕ ಪೂಜಾ ಕಾರ್ಯಗಳು, ಶುಭ ಸಮಾರಂಭಗಳು, ಮದುವೆ, ನಡೆಯಬೇಕಾದರೂ ವೀಳ್ಯದೆಲೆ ಮತ್ತು ಅಡಿಕೆ ಮುಖ್ಯ. ಆದರೆ ಈಗ ಎಲೆ ಅಡಕೆ ಜಿಗಿಯುವವರ ಪಾಲಿಗಂತೂ ಬಾಯಿ ಸುಡುತ್ತಿದೆ. ಕಳೆದ ನಾಲ್ಕು ತಿಂಗಳಿನಿಂದ ವೀಳ್ಯದೆಲೆಯ ಬೆಲೆ ಬರೋಬ್ಬರಿ ಮೂರು ಪಟ್ಟು ಹೆಚ್ಚಳ ಆಗಿದ್ದು, ಬೆಲೆ ಏರಿಕೆಯ ಬಿಸಿ ಗ್ರಾಹಕರಿಗೆ ಹೇಳ ತೀರದಾಗಿದೆ.

ಉತ್ತರ ಕರ್ನಾಟಕದ ಹಾವೇರಿ, ಧಾರವಾಡ , ಗದಗ, ವಿಜಯಪುರ ಹಾಗೂ ಇತರೆ ಕಡೆಗಳಲ್ಲಿ ಬೆಳೆಯುತ್ತಿರುವ ವೀಳ್ಯದೆಲೆಯ ಇಳುವರಿ ಈ ವರ್ಷ ತೀರಾ ಕಡಿಮೆಯಾಗಿದ್ದು, ಮಾರುಕಟ್ಟೆಗೆ ಅಗತ್ಯಕ್ಕೆ ತಕ್ಕಷ್ಟು ವೀಳ್ಯದೆಲೆ ಪೂರೈಕೆಯಾಗದಿದ್ದರಿಂದ ದರ ತೀವ್ರವಾಗಿ ಏರಿಕೆಯಾಗಲು ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ ವೀಳ್ಯದೆಲೆ ದರ ದುಬಾರಿಯಾಗಿದ್ದು, 12 ಸಾವಿರ ವೀಳ್ಯದೆಲೆ ದರ ಕನಿಷ್ಠ 5 ಸಾವಿರ ಹಾಗೂ ಗರಿಷ್ಠ 22 ಸಾವಿರಕ್ಕೆ ತಲುಪಿದೆ. ಬಿಡಿ ಮಾರುಕಟ್ಟೆಯಲ್ಲಿ ಗುಣಮಟ್ಟದ 100 ವೀಳ್ಯೆದೆಲೆಗಳನ್ನು 200ರಿಂದ 500 ರು. ಗೆ ಮಾರಾಟ ಮಾಡಲಾಗುತ್ತಿದೆ. ಚಿಲ್ಲರೆ ಅಂಗಡಿಗಳಲ್ಲಿ ದರ ಒಂದು ಎಲೆಗೆ ಸಾಧಾರಣ ಗುಣಮಟ್ಟದ ಎಲೆಯು 10 ರು. ಗೆ 3 ಸಿಗುತ್ತದೆ. ಉತ್ತಮ ದೊಡ್ಡ ಗಾತ್ರದ ವೀಳ್ಯದೆಲೆಯ ಬೆಲೆ ರು. 5 ಆಗಿದೆ.

ಕಳೆದ ವಾರದವರೆಗೆ 100 ಎಲೆಗಳಿಗೆ 100ರಿಂದ 200 ದರವಿತ್ತು. ಈ ವಾರ ದರ ದುಪ್ಪಟ್ಟು ಆಗಿರುವುದರಿಂದ, ಎಲೆಗಳ ಖರೀದಿ ಪ್ರಮಾಣವೂ ಕಡಿಮೆಯಾಗಿದೆ. 100 ಎಲೆ ಖರೀದಿಸುವವರು 50 ಎಲೆಗಳನ್ನು ಮಾತ್ರ ಖರೀದಿಸುತ್ತಿದ್ದಾರೆ. ಬಹುತೇಕ ಜಮೀನಿನಲ್ಲಿ ವೀಳ್ಯೆದೆಲೆ ಇಳುವರಿ ತೀರಾ ಕಡಿಮೆ ಆಗಿದೆ. 60 ಸಾವಿರ ವೀಳ್ಯೆದೆಲೆ ಬೆಳೆಯುತ್ತಿದ್ದ ತೋಟದಲ್ಲಿ, 12 ಸಾವಿರ ಎಲೆಗಳು ಬೆಳೆಯುವುದೂ ಕಷ್ಟವಾಗಿದೆ. ಬೆಳೆದಷ್ಟು ವೀಳ್ಯೆದೆಲೆಗಳನ್ನು ಹರಿದು ಮಾರುಕಟ್ಟೆಗೆ ಸಾಗಿಸಲಾಗುತ್ತಿದೆ. ಕಡಿಮೆ ವೀಳ್ಯೆದೆಲೆ ಇರುವುದರಿಂದ, ದರ ದುಬಾರಿ ಆಗುವುದು ಸಹಜ ಎನ್ನುತ್ತಾರೆ ವೀಳ್ಯೆದೆಲೆ ವ್ಯಾಪಾರಿಗಳು.

> ಜಮೀನಿನಲ್ಲಿ ವೀಳ್ಯೆದೆಲೆ ಬೆಳೆಯುತ್ತಿದ್ದೇವೆ, ಅದುವೇ ನಮಗೆ ಆದಾಯದ ಮೂಲ. ಆದರೆ ಇತ್ತೀಚಿನ ದಿನಗಳಲ್ಲಿ ವಾತಾವರಣದಲ್ಲಾದ ಬದಲಾವಣೆಯಿಂದ ಗಾಳಿ ಬೀಸುತ್ತಿದೆ. ಈ ಗಾಳಿಯಿಂದಾಗಿ ಎಳೆಗಳು ಉದುರಿ ಬೀಳುತ್ತಿವೆ. ಸಣ್ಣದಾಗಿ ಚಿಗುರುವ ವೀಳ್ಯೆದೆಲೆ ಸಹ ಮುದುಡುತ್ತಿವೆ.
>
> ಅಬ್ದುಲ್ ಮಲ್ಲೂತ ರೈತ, ಸವಣೂರು



2024ರ ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ 12 ಸಾವಿರ ವೀಳ್ಯೆದೆಲೆ ಒಳಗೊಂಡ ಪೆಂಡಿಯೊಂದಕ್ಕೆ ಕನಿಷ್ಠ 1,000 ಗರಿಷ್ಠ 6,000 ದರವಿತ್ತು. ಈಗ ಅದೇ ದರವು ಗರಿಷ್ಠ 22 ಸಾವಿರಕ್ಕೆ ಏರಿದೆ. ಮುಂದಿನ ದಿನಗಳಲ್ಲಿ ವೀಳ್ಯೆದೆಲೆ ಇಳುವರಿ ಹೆಚ್ಚಾದರೆ ಮಾತ್ರ ದರವೂ ಕಡಿಮೆಯಾಗಲಿದೆ ಎಂದು ಹೇಳುತ್ತಾರ ವೀಳ್ಯದೆಲೆ ವ್ಯಾಪಾರಿ ರಜಾಕ್.

ಮಾರುಕಟ್ಟೆಯಲ್ಲಿ ವೀಳ್ಯೆದೆಲೆಯ ಬೆಲೆ ಗಗನಕ್ಕೆ ಜಿಗುತ್ತಲೇ ಇದ್ದು, ಒಂದು ಕಟ್ಟು 100 ವೀಳ್ಯೆದೆಲೆಯ ಬೆಲೆ ಈಗ ಬರೋಬರಿ 150ರಿಂದ 200 ರು.ಗಡಿದಾಟಿದೆ. ಈ ವರ್ಷ ಸಹ ದಾಖಲೆಯ ಬೆಲೆ ಏರಿಕೆಯಾಗಿದೆ. ವೀಳ್ಯೆದೆಲೆ ಬೆಲೆ ಮಾರುಕಟ್ಟೆಯಲ್ಲಿ ಕಳೆದ ಮೂರು ತಿಂಗಳಿಂದ ಏರಿಕೆ ಆಗುತ್ತಿದ್ದು, ಗ್ರಾಹಕರು ಕಂಗಾಲಾಗುವಂತೆ ಮಾಡಿದೆ. ಜಿಲ್ಲೆಯಲ್ಲಿ ವೀಳ್ಯೆದೆಲೆಯ ಬೆಲೆ ದುಬಾರಿ ಆಗುತ್ತಿದ್ದು, ಒಂದು ದಿನ ಇದ್ದ ದರ ಇನ್ನೊಂದು ದಿನ ಇಲ್ಲದಾಗಿದೆ. ದುಬಾರಿಯಾದರೂ ಮಾರುಕಟ್ಟೆಯಲ್ಲಿ ಗುಣಮಟ್ಟದ ವೀಳ್ಯೆದೆಲೆ ಸಿಗುತ್ತಿಲ್ಲ ಎಂಬುದು ಗ್ರಾಹಕರ ಕೊರಗು.

ತುಮಕೂರಿನ ಪಾವಗಡ, ಆಂಧ್ರಪ್ರದೇಶದ ಹಿಂದೂಪುರದ ಅಮಲಾಪುರದಿಂದ ಜಿಲ್ಲೆಯ ಗೌರಿಬಿದನೂರು, ಮಂಚೇನಹಳ್ಳಿಗಳಿಂದಲೂ ನಗರಕ್ಕೆ ವೀಳ್ಯೆದೆಲೆ ಸರಬರಾಜು ಆಗುತ್ತಿದೆ. ಪ್ರತಿ ವರ್ಷ ನವೆಂಬರ್‌ನಿಂದ ಫೆಬ್ರವರಿಯ ವರೆಗೆ ದಟ್ಟ ಮಂಜು ಬೀಳುವ ಕಾರಣ ವೀಳ್ಯೆದೆಲೆ ಸರಿಯಾಗಿ ಬರುವುದಿಲ್ಲ ಜವಾರಿ ಎಲೆ ದುಬಾರಿ ಆಗುವುದ ರೊಂದಿಗೆ ಪಾನ್ ಬೀಡಾಕ್ಕೆ ಬಳಸುವ ಕೋಲ್ತ್ರ ವೀಳ್ಯೆದೆಲೆಯ ದರವೂ ಹೆಚ್ಚಳವಾಗಿದೆ. ಎರಡು ತಿಂಗಳ ಹಿಂದೆ 150 ಎಲೆಗಳ ಒಂದು ಕಟ್ಟು ರು. 400ಕ್ಕೆ ದೊರೆಯುತ್ತಿತ್ತು, ಈಗ ಅದು ರು. 800ಕ್ಕೆ ಏರಿಕೆಯಾಗಿದೆ. ಆದರೆ ಪಾನ್ ಬೀಡಾ ಬೆಲೆಯನ್ನು ಮಾತ್ರ ರು. 15ಕ್ಕಿಂತ ಹೆಚ್ಚು ಏರಿಸಲು ಸಾಧ್ಯವಾಗಿಲ್ಲ ಎನ್ನುತ್ತಾರೆ ಇಲ್ಲಿನ ಪಾನ್ ಬೀಡಾ ವ್ಯಾಪಾರಿ ಪಿ.ಮುಜೀಬುಲ್ಲಾ.

ಹೊರ ರಾಜ್ಯಕ್ಕೆ ರಫ್ತು

ಹಾವೇರಿ ಜಿಲ್ಲೆಯ ಸವಣೂರು ಹಾನಗಲ್ ಹಿರೇಕೆರೂರು ಶಿಗ್ಗಾವಿ ರಟ್ಟೀಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚಾಗಿ ವೀಳ್ಯೆದೆಲೆ ಬೆಳೆಯಲಾಗುತ್ತಿದೆ. ಇಲ್ಲಿ ಬೆಳೆಯುವ ವೀಳ್ಯೆದೆಲೆ ರಾಜ್ಯದೊಳಗೆ ಮಾತ್ರವಲ್ಲದೇ ಹೊರ ರಾಜ್ಯಕ್ಕೂ ರಫ್ತಾಗುತ್ತಿದೆ. ಸವಣೂರು, ಶಿಗ್ಗಾವಿ, ಕಾರಡಗಿ, ಧಾರವಾಡ, ಕಲಬುರ್ಗಿ ಬೆಳಗಾವಿ ಮಾರುಕಟ್ಟೆಗೆ ವೀಳ್ಯೆದೆಲೆ ಕಳುಹಿಸುತ್ತೇವೆ. ಹೆಚ್ಚು ಗುಣಮಟ್ಟದ ವೀಳ್ಯೆದೆಲೆಯನ್ನು ಮುಂಬೈ ಆಂಧ್ರಪ್ರದೇಶ ಭೂಪಾಲ್ ಸೇರಿದಂತೆ ಹಲವು ರಾಜ್ಯಗಳಿಗೂ ರಫ್ತು ಮಾಡಲಾಗುತ್ತದೆ.

Ind Exp Pg 05

NABARD cuts farm loan allocation to Karnataka

EXPRESS NEWS SERVICE
@ Bengaluru

NATIONAL Bank of Agriculture and Rural Development (NABARD) has significantly cut its short-term (Seasonal Agriculture Operation) (ST-SAO) allocation to Karnataka, said Cooperation Minister KN Rajanna. Replying to a question by Congress MLC Dinesh Gooligowda on the allocations to Karnataka's cooperation sector by NABARD during the question hour in Council on Tuesday, Rajanna said, "NABARD has allocated Rs 3,236 crore to Karnataka for 2024-25. During 2023-24, the allocation was Rs 5,600 crore. Compared to the previous allocation, the allocation is short by Rs 2,363 crore."

"Only Rs 2,340 crore was allocated in 2024-25 and after the state government wrote a letter requesting more funds, an additional Rs 896 crore was granted," Rajanna said.

NABARD is one of the major organisations allocating funds to the cooperation sector and the state had placed a request for allocation of Rs 9,200 crore. The Centre has reduced NABARD funds.

Chief Minister Siddaramaiah had met Prime Minister Narendra Modi to restore NABARD farm loans, Rajanna said, adding that there is hope that NABARD will allocate more funds to Karnataka.

HRITHIK KIRAN BAGADE

The **Wallace Line**, a biogeographical boundary between Asia and Australia, displays how animals isolated by geographic and climatic factors, even on islands located close to each other, can evolve distinct characteristics



SPECIES YET SO NEAR, YET SO FAR

DURING the early stages of Earth's evolution, when the supercontinent Pangea split into two parts – Laurasia and Gondwanaland – which further moved apart, creating the world geography we know today, there was a drastic shift in the evolution of life as well. An evident result was the variety and diversity in the animal kingdom, divided by geography, but bound by Earth's ever-changing nature. One of the most intriguing instances of this phenomena rests in biogeographical boundaries.

A biogeographical boundary refers to the geographic areas or regions that delineate the distribution of different species, ecosystems, or biological communities. These boundaries are shaped by a combination of environmental factors, such as climate, geography, and ecological processes, as well as historical events like the Continental Drift, glaciations, and migration patterns. They also explain the causes for biodiversity, species adaptation, and the interplay between organisms and their habitats across different regions of the globe. One of the most interesting biogeographical boundaries which particularly depicts how species on either side have developed remarkable features over time, is the Wallace Line that separates the flora and fauna of the islands of Asia from those of Australia.

Named after British naturalist Alfred Russel Wallace, who first identified the boundary in the mid-19th century, this line represents a critical point in understanding the distribution of species across the Malay Archipelago and beyond. The Wallace Line, stretching through the waters between Borneo and Sulawesi, and extending southward to the islands of Bali and Lombok, in Indonesia, delineates the sharp divide between species that are more closely related to Asia and those that have closer affinities with Australia.

History and location

The concept of the Wallace Line emerged from Alfred's travels and field studies across the Malay Archipelago during the mid-1800s. Wallace, who is also credited with co-developing the theory of natural selection along with Charles Darwin, was fascinated by the distinctiveness of the wildlife in these islands.

During his time in the region, Wallace noticed a curious division in the animal species found on different islands. To the west of a line running through the archipelago, the fauna was closely related to that of Southeast Asia, while to the east, the fauna bore strong similarities to that of Australia. This division seemed to indicate a natural boundary that could explain why certain species were found in one region, but not the other. Wallace published his observations and conclusions in The Geographical Distribution of Animals (1869). He argued that the line was a result of the different historical and environmental factors that influenced the development of species in each region, which led to the creation of two distinct faunal zones. The Wallace Line has since become a fundamental concept in the study of biogeography, providing insights into how natural barriers and geographical isolation can lead to speciation.

The Wallace Line is not straight, but rather a narrow zone that separates two distinct ecological realms. It runs between the islands of Bali and Lombok in the west, and extends through the Makassar Strait between Borneo and Sulawesi in the north, curving around the islands of the Philippine Archipelago. Accordingly, the fauna of Bali shares many species with Java and Sumatra, while Lombok's fauna is more similar to that of Australia. The animals on Borneo are typically Southeast Asian in origin, while Sulawesi has a more Australia-affiliated fauna. Since the line also separates species in other regions, such as the Philippines, some islands like Mindanao display Australian connections, while others like Luzon exhibit Southeast Asian characteristics.This region is a critical area in terms of evolutionary biology because it highlights the ecological boundaries between different biomes. These islands represent distinct ecological zones with unique species that were unable to cross the Wallace Line due to historical and environmental factors.

Biological Significance

One of the most striking features of the Wallace Line is the difference in the types of species found on either side. The dividing line is characterised by a clear distinction in the types of mammals, birds, reptiles, and marine life.

On the Asian Side (West of the Wallace Line), which is closer to mainland Southeast Asia, the fauna is dominated by species typically associated with the Asian continent. For eg., Southeast Asian monkeys, such as the long-tailed macaque, tiger and other large cats, elephant, and wild boar. In general, these species are representative of the Southeast Asian or Indomalayan realm, characterised by dense tropical forests and a humid climate.

On the Australian Side (East of the Wallace Line), the fauna is much more closely related to Australian species. For eg., marsupials, such as the kangaroo, wallabies, possums, and echidnas, which are spiny anteaters found only in Australia and New Guinea; birds of paradise, also endemic to New Guinea; and crocodiles, particularly the saltwater crocodile, which can be found across northern Australia and parts of New Guinea. A distinct specimen of the eastern part is the Komodo Dragon, the world's largest lizard that evolved in isolation on the island from which it derives its name. In stark contrast to the Asian side, the Australian side is home to many marsupials (a class of mammals that carry and nurse their young in pouches), a feature that is absent in Southeast Asia. The presence of such species has led scientists to conclude that these regions have had vastly different evolutionary histories.

Causes behind the line

Several factors contribute to the existence of the Wallace Line and the distinct difference in the species found on either side. Firstly, the division between Asian and Australian fauna can be traced back millions of years to the shifting of the Earth's tectonic plates. The islands on the western side of the Wallace Line, such as Borneo and Sumatra, are part of the Sunda Shelf, which is a continuation of the Asian mainland. On the other hand, the islands to the east of the line are part of the Sahul Shelf, which is connected to Australia. When the landmasses of Asia and Australia were once more connected during periods of lower sea levels (such as during the Ice Age), species could freely move between the regions. However, rising sea levels during warmer periods created geographic barriers that isolated the different species, leading to the distinct evolutionary trajectories observed today. Secondly, climatic factors, particularly the variation in rainfall, temperature, and humidity, also played a significant role in the divergence of species across the Wallace Line. The western islands of the archipelago are subject to monsoonal rainfall patterns, which sustain dense tropical rainforests. The eastern islands, however, have a drier climate that favours different types of vegetation and habitats. These climatic differences further reinforced the ecological divide between the two regions.

Lastly, the bodies of water between the islands, particularly the Makassar Strait and the Wallace Strait, are relatively deep and act as natural barriers to species migration. Despite the relatively short distances between the islands, these water barriers prevented the crossing of many species, contributing to the development of distinct faunal regions on either side of the line. All the said factors have firmed up over millions of years.

The Wallace Line is a clear demonstration of the profound impact that geographical and ecological boundaries have on the distribution of species. It highlights the importance of isolation in the process of speciation. When populations of species become isolated by geographical barriers, such as oceans or mountain ranges, they can evolve independently over time, leading to the development of unique species that are adapted to their specific environments.

The Wallace Line has also played a critical role in the study of zoogeography – the study of the geographical distribution of animal species. It has provided biogeographers with an invaluable case study in how geographic factors can lead to the creation of distinct biological regions. Understanding these patterns helps scientists understand broader ecological principles, such as the effects of isolation on biodiversity, as well as the impacts of human activity on species distribution in the modern world.


Ind Exp Pg 12

ಬೆಂಗಳೂರಲ್ಲಿ ಅಂತಾರಾಷ್ಟ್ರೀಯ ಪುಷ್ಪ ಮಾರುಕಟ್ಟೆ ನಿರ್ಮಾಣ

ರಾಯಚೂರಿನಲ್ಲಿ 25 ಕೋಟಿ ರು. ವೆಚ್ಚದಲ್ಲಿ ಸುಸಜ್ಜಿತವಾದ ಒಣಮೆಣಸಿನಕಾಯಿ ಮಾರುಕಟ್ಟೆ

Viswavani Pg 09

ಬೆಂಗಳೂರು: ರಾಜ್ಯದಲ್ಲಿ ಸುಮಾರು 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಪುಷ್ಪೋದ್ಯಮವಿದ್ದು, ಮಾರಾಟ ಮತ್ತು ರಫ್ತು ಉತ್ತೇಜಿಸಲು ಬೆಂಗಳೂರಿನಲ್ಲಿ ಸುಸಜ್ಜಿತವಾದ ಅಂತಾರಾಷ್ಟ್ರೀಯ ಮಟ್ಟದ ವಾಣಿಜ್ಯ ಪುಷ್ಪ ಮಾರುಕಟ್ಟೆ ನಿರ್ಮಾಣ ಮಾಡಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ವಿಧಾನಪರಿಷತ್ತಿಗೆ ತಿಳಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಮಂಗಳವಾರ ಶಾಸಕ ಸಿ. ಎನ್. ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸಾರ್ವಜನಿಕ ಸಹಭಾಗಿತ್ವದ ಬದಲಿಗೆ ಸರಕಾರ ಅಥವಾ ಎಪಿಎಂಸಿಯ ಸ್ವಂತ ನಿಧಿಯಿಂದ ಮಾರುಕಟ್ಟೆ ಅನುಷ್ಠಾನಗೊಳಿಸಲು ನಿರ್ಧರಿಸಿ ಆರ್ಥಿಕ ಇಲಾಖೆಗೆ ಕಡತ ಸಲ್ಲಿಸಲಾಗಿದೆ. ಬೆಂಗಳೂರಿನ ದಾಸನಪುರ, ಮೈಸೂರು, ಕೋಲಾರ ಎಪಿಎಂಸಿಗಳಲ್ಲಿ ಪಿಪಿಪಿ ಮಾದರಿಯಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್‌ಗಳ ಸ್ಥಾಪನೆಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಅನುಮೋದನೆ ಪಡೆಯಲು ಡಿಪಿಆರ್ ಸಲ್ಲಿಸಲಾಗಿದೆ ಎಂದರು.

ರಾಯಚೂರಿನಲ್ಲಿ 25 ಕೋಟಿ ರು. ವೆಚ್ಚದಲ್ಲಿ ಸುಸಜ್ಜಿತವಾದ ಒಣಮೆಣಸಿನಕಾಯಿ ಮಾರುಕಟ್ಟೆ ನಿರ್ಮಿಸಲು ಅನುಮೋದನೆಯಾಗಿದ್ದು, ಟೆಂಡರ್ ಕರೆಯಲಾಗಿದೆ. ಮಂಗಳೂರಿನ ನೆಲ್ಲಿಕಾಯಿ ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ 35 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಕೃಷಿ ಸಂಕೀರ್ಣ ನಿರ್ಮಿಸಲು ವಿಸ್ತೃತ ಯೋಜನಾ ವರದಿ ಪಡೆಯಲಾಗಿದ್ದು, ಪರಿಶೀಲನೆ ಹಂತದಲ್ಲಿದೆ ಎಂದು ಸಚಿವರು ವಿವರಿಸಿದರು.